**ಸಾಕ್ಷಿಯನ್ನು ದಿಃ 09.03.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮಧ್ಯಂತರ ಅರ್ಜಿ ಮೇಲಿನ ಆದೇಶ ಮೇರೆಗೆ ಪಾಟೀ ಸವಾಲುಃ 6 ನೇ ಪ್ರತಿವಾದಿ ಪರ ಶ್ರೀ ಈ.ಬಿ.ಆರ್ ವಕೀಲರಿಂದಃ-**

ನಾನು ಯಾವುದೆ ಒಂದು ಡೀಡ್ ಅನ್ನು ತಯಾರಿಸಲು ಇಂಡಿಯನ್ ರಿಜಿಸ್ಟ್ರೇಶನ್ ಆ್ಯಕ್ಟ್ ಮತ್ತು ಟ್ರಾನ್ಸ್ಫರ್ ಆಫ್ ಪ್ರಾಪರ್ಟಿ ಆ್ಯಕ್ಟ್ ಅಡಿಯಲ್ಲಿ ತಯಾರಿಸುತ್ತೇನೆ ಎಂದರೆ ಸರಿ. ನಾನು ಬರೆದುಕೊಟ್ಟಂತಹ ಡೀಡ್ ಅನ್ನು ಕಾನೂನು ಅಡಿಯಲ್ಲಿ ಊರ್ಜಿತವಾಗಬೇಕಾದರೆ ಯಾವುದೆಲ್ಲಾ ಕ್ರಮಗಳನ್ನು ಅನುಸರಿಸಬೇಕು ಎಂಬ ತಿಳುವಳಿಕೆ ಇದೆ. ನಿಪಿ. 1 ರ ದಾಖಲೆ ಬರೆದುಕೊಡುವ ಸಂದರ್ಭದಲ್ಲಿ ಆರ್.ಟಿ.ಸಿ ಮತ್ತು ಪಕ್ಷಗಾರರ ಆಧಾರ್ ಕಾರ್ಡಗಳನ್ನು ಪರಿಶೀಲಿಸಿದ್ದೇನೆ. ಡೀಡ್ ನಲ್ಲಿ ಪಕ್ಷಗಾರರ ಆಧಾರ್ ಕಾರ್ಡ ನಂಬರ್, ಅವರ ವಯಸ್ಸನ್ನು ನಮೂದು ಮಾಡಬೇಕಾಗುತ್ತದೆ ಸಾಕ್ಷಿ ಆ ರೀತಿ ಏನು ಇಲ್ಲ ಎನ್ನುತ್ತಾರೆ. ಹಾಗೆ ಪರಿಶೀಲಿಸಿದ ನಂತರ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಿರಾ ಎಂದರೆ ಸಾಕ್ಷಿ ಅದು ನನ್ನ ವ್ಯಾಪ್ತಿಗೆ ಬರುವುದಿಲ್ಲ ಎನ್ನುತ್ತಾರೆ. ನಾನು ಯಾವುದೆ ದಾಖಲೆಗಳನ್ನು ಪರಿಶೀಲಿಸದೆ ಇರುವ ಕಾರಣ ಅಂತಹ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

ಒಂದು ಡೀಡ್ ಊರ್ಜಿತವಾಗಬೇಕೆಂದರೆ ಇಬ್ಬರೂ ಸಾಕ್ಷಿದಾರರ ಸಹಿಗಳು ಬೇಕೆ ಬೇಕಾಗುತ್ತದೆ ಎಂದರೆ ಸರಿಯಲ್ಲ. ಸಾಕ್ಷಿದಾರರನ್ನು ಡೀಡ್ ನಲ್ಲಿ ಸೇರಿಸಬೇಕಾದರೆ ಅವರ ಬಗ್ಗೆ ಸಂಪೂರ್ಣ ವಿವರವನ್ನು ತಿಳಿದುಕೊಂಡು ದಾಖಲೆಯಲ್ಲಿ ನಮೂದಿಸಬೇಕಾಗುತ್ತದೆ ಎಂದರೆ ಸಾಕ್ಷಿ ಹಾಗೆ ತಿಳಿದುಕೊಂಡೆ ನಮೂದಿಸಿದ್ದೇನೆ ಎನ್ನುತ್ತಾರೆ. ಸದರಿ ಡೀಡ್ ನಲ್ಲಿ ನಮೂದಿಸಿದ ಸಾಕ್ಷಿದಾರರ

ಸಂಪೂರ್ಣ ವಿವರವನ್ನು ನಮೂದು ಮಾಡಿರುತ್ತೇನೆ. ನಿಪಿ. 1 ರ ದಾಖಲೆಯನ್ನು ತಯಾರಿಸುವ ಸಮಯದಲ್ಲಿ ಬೆಟ್ಟಮ್ಮ ಮತ್ತು ಅವರ ಮಕ್ಕಳು, ಮೊಮ್ಮಕ್ಕಳು ಹಣವನ್ನು ಪಡೆದಿರುತ್ತಾರೆ. ನಿಖರವಾಗಿ ಯಾರ್ಯಾರು ಎಷ್ಟೆಷ್ಟು ಹಣ ಪಡೆದಿದ್ದರು ಎಂಬ ಬಗ್ಗೆ ನಮೂದು ಮಾಡಿದ್ದಿರಾ ಎಂದರೆ ಸಾಕ್ಷಿ ಒಟ್ಟಿಗೆ ಹಣವನ್ನು ಪಡೆದಿದ್ದರು ಅದನ್ನು ನಮೂದಿಸಿದ್ದೇನೆ ಎನ್ನುತ್ತಾರೆ.

ನಿಪಿ. 1 ರ ದಾಖಲೆ ವಾರ್ಷಿಕವಾಗಿ ಭೋಗ್ಯ ಪತ್ರ ಎಂದು ಬರೆದುಕೊಡಲಾಗಿದೆ ಎಂದರೆ ಸರಿಯಲ್ಲ. ಈ ಕೇಸ್ ನ 6 ಪ್ರತಿವಾದಿ ವಾದಿಯ ತನ್ನ ತಂಗಿಯಾದ ಕಾರಣ ದಾಖಲೆಯನ್ನು ಓದದೆ ನಂಬಿಕ ಮೇಲೆ ಸಹಿ ಮಾಡಿದ್ದರು ಎಂದರೆ ಸರಿಯಲ್ಲ. ನಿಪಿ. 1 ಕರಾರು ಪತ್ರವನ್ನು ವಾದಿಗೆ ಅನುಕೂಲವಾಗಲಿ ಎಂದು ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ನಿಪಿ. 1 ದಾಖಲೆಗಳನ್ನು 6 ಲಕ್ಷ 25 ಸಾವಿರ ಗಳಿಗೆ ಬರೆದುಕೊಟ್ಟಿದ್ದು, ಸ್ಟ್ಯಾಂಪ್ ಪೇಪರ್ ಅನ್ನು 200 ರೂ. ಗೆ ಖರೀದಿ ಮಾಡಿ ತಂದಿದ್ದರು. ಸದರಿ 6 ಲಕ್ಷ 25 ಲಕ ರೂ. ಗೆ 200 ರೂ. ಸ್ಟ್ಯಾಂಪ್ ಪೇಪರ್ ಸಮರ್ಪಕವಾದದ್ದಲ್ಲ ಎಂದರೆ ಸರಿಯಲ್ಲ. ಸ್ಟ್ಯಾಂಪ್ ಡ್ಯೂಟಿ ಸರಿಯಾಗಿ ಕಾಪಿ ಮಾಡಿಲ್ಲ ಎಂದರೆ ಸರಿಯಲ್ಲ. ವಾದಿಗೆ ಅನುಕೂಲವಾಗಲಿ ಎಂದು ನಿಪಿ. 1 ರ ದಾಖಲೆಯನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)

1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.